ಶ್ರೀ ರಾಮಕೃಷ್ಣ ಹೆಗ್ಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

ಅ) ಜನಸಂಖ್ಯೆಯ ಅನುಗುಣವಾಗಿಯೇ ಪೊಲೀಸ್ ಸಿಬ್ಬಂದಿಯನ್ನು ನೇಮಿಸಬೇಕೆಂಬ ನಿಯಮ ಇಲ್ಲ. ಪೊಲೀಸ್ ಸಿಬ್ಬಂದಿಯ ನೇಮಕವನ್ನು ಕಾನೂನು ಮತ್ತು ಶಾಂತಿಪಾಲನೆಯ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತದೆ.

ಆ) ಕುಂದಾಪುರ ಆರಕ್ಷಕ ಠಾಣೆಯಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ಇದೆ:

ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್	—	೧
ಹೆಡ್ ಕಾನ್ಸ್‌ಟೆಬಲ್‌ರುಗಳು	—	೪
ಪೊಲೀಸ್ ಕಾನ್ಸ್‌ಟೆಬಲರುಗಳು	—	೨೨

ಇ) ಸಿರ್ಸಿ ಕಸಬ ಆರಕ್ಷಕ ಠಾಣೆಯಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ಇದೆ:

ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್	—	೧
ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್	—	೧
ಹೆಡ್ ಕಾನ್ಸ್‌ಟೆಬಲರುಗಳು	—	೯
ಪೊಲೀಸ್ ಕಾನ್ಸ್‌ಟೇಬಲರುಗಳು	—	೪೭

ಸಿರ್ಸಿ ಗ್ರಾಮಾಂತರ ಆರಕ್ಷಕ ಠಾಣೆ.

ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್	—	೨
ಹೆಡ್ ಕಾನ್ಸ್‌ಟೇಬಲರುಗಳು	—	೫
ಪೊಲೀಸ್ ಕಾನ್ಸ್‌ಟೇಬಲರುಗಳು	—	೨೩

ಹರಪನಹಳ್ಳಿ ತಾಲ್ಲೂಕಿನಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಕ ಮಾಡುವುದು

೬೮ (೫೫೦) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಹಲವಾಗಲು, ಆರಸೀಕೆರೆ ಇನ್ನಿತರ ಹಳ್ಳಿಗಳಲ್ಲಿರುವ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ಎಷ್ಟು ದಿನಗಳೊಳಗಾಗಿ ಅಲ್ಲಿಗೆ ನಿಯೋಜಿಸಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಹೌದು

ಆ) ಸ್ನಾತಕೋತ್ತರ ಪದವಿ ಶಿಕ್ಷಣಕ್ಕೆ ನಿಯೋಜಿಸಿರುವ ಮಹಿಳಾ ವೈದ್ಯರುಗಳು ಫೆಬ್ರುವರಿ ತಿಂಗಳೊಳಗೆ ವಾಪಸ್ಸು ಬಂದ ನಂತರ ಆ ಹುದ್ದೆಗಳನ್ನು ಭರ್ತಿಮಾಡಲಾಗುವುದು.

ಬಾದಾಮಿ ತಾಲ್ಲೂಕಿನಲ್ಲಿ ಸಹಕಾರಿ ಆಯುರ್ವೇದ ಆಸ್ಪತ್ರೆ ಮಂಜೂರು ಮಾಡಿರುವುದು

೭೧ (೧೯) ಶ್ರೀ ಮಲ್ಲಿಖಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗುಳೇದಗುಡ್ಡ ಕ್ಷೇತ್ರದ ಬಾದಾಮಿ ತಾಲ್ಲೂಕಿನ ಕೆಲವಡಿ ಗ್ರಾಮದಲ್ಲಿ ಒಂದು ಸಹಕಾರಿ ಆಯುರ್ವೇದ ಆಸ್ಪತ್ರೆ ೧೯೮೦ರಲ್ಲಿ ಮಂಜೂರು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತಾಲ್ಲೂಕು ಮಟ್ಟದ ಯುವಜನ ಮೇಳಗಳಿಗೆ ಅನುದಾನ ಕೊಡುತ್ತಿರುವುದು

೭೨ (೧೯೪) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ ಗುಡ್ಡ).—ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ತಾಲ್ಲೂಕು ಮಟ್ಟದ ಯುವಜನ ಮೇಳಗಳಿಗೆ ರೂ. ೧೦೦೦ ಅನುದಾನ ಕೊಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಸುಮಾರು ರೂ. ೩೦೦೦ ಗಳಿಗೆ ಹೆಚ್ಚಿಸುವುದನ್ನು ಸರ್ಕಾರವು ಪರಿಶೀಲಿಸುವುದೇ ?

ಶ್ರೀ ಡಾ।। ಜೀವರಾಜ ಆಳ್ವಾ (ಕನ್ನಡ ಮತ್ತು ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು).—

ಅ) ಹೌದು

ಆ) ಹಣದ ಅಭಾವವಿರುವುದರಿಂದ ಸದ್ಯಕ್ಕೆ ೩೦೦೦ ರೂ. ಗಳಿಗೆ ಹೆಚ್ಚಿಸುವುದಕ್ಕೆ ಆಗುವುದಿಲ್ಲ.

ರಾಜ್ಯದ ಕಾರಾಗೃಹಗಳಲ್ಲಿ ದುಡಿಯುತ್ತಿರುವ ನೌಕರರ ಕುಂದುಕೊರತೆಗಳು

೭೪ (೫೮೨) ಶ್ರೀ ಕೆ. ವಸಂತ ಬಂಗೇರ (ಬೆಳ್ತಗಂಡಿ).—ಮಾನ್ಯ ಗೃಹ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ತಿಳಿಸುವರೇ :—

ಅ) ರಾಜ್ಯದ ಕಾರಾಗೃಹಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಕುಂದುಕೊರತೆಗಳು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವರ ಬೇಡಿಕೆಗಳ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ರಮೇಶ್ ಜಿಗಜಿಣಗಿ (ರಾಜ್ಯ ಗೃಹ ಸಚಿವರು).—

ಅ) ಕೆಲವು ಕುಂದುಕೊರತೆಗಳು ಸರ್ಕಾರದ ಗಮನಕ್ಕೆ ಬಂದಿವೆ.

ಆ) ಕಾರಾಗೃಹಗಳ ಸಿಬ್ಬಂದಿಯ ಕುಂದುಕೊರತೆಗಳನ್ನು ನಿವಾರಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

(೧) ಉಚಿತ ಸಮವಸ್ತ್ರ ಮತ್ತು ಸಮವಸ್ತ್ರ ಭತ್ಯ ನೀಡಲಾಗಿದೆ.

(೨) ಸಮವಸ್ತ್ರ ಶುಚಿಗೊಳಿಸಲು ಭತ್ಯ ಮತ್ತು ಸಮವಸ್ತ್ರ ಘೋಷಣೆ ಭತ್ಯ ನೀಡಲಾಗಿದೆ.

(೩) ಹಂತ ಹಂತವಾಗಿ ಕಾರಾಗೃಹಗಳ ಸಿಬ್ಬಂದಿಗೆ ವಸತಿ ಗೃಹ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.

(೪) ಗುಲ್ಬರ್ಗಾ ಕೇಂದ್ರ ಕಾರಾಗೃಹ ಸಿಬ್ಬಂದಿಯ ಬೇಡಿಕೆಯಂತೆ ನಗರ ಮತ್ತು ಕಾರಾಗೃಹದ ಮಧ್ಯೆ ಸಾರಿಗೆ ಸಂಪರ್ಕ ಒದಗಿಸಲಾಗಿದೆ.

(೫) ಗೆಜಿಟೆಡ್ ರಜೆಯನ್ನು ಉಪಯೋಗಿಸಿಕೊಳ್ಳಲಾಗದ್ದಕ್ಕೆ ವರ್ಷಕ್ಕೆ ೧೫ ದಿನಗಳ ಹೆಚ್ಚಿನ ಸಂಬಳವನ್ನು ಹಾಗೂ ವಾರದ ರಜೆ ಬದಲಾಗಿ ದಿನ ಭತ್ಯವನ್ನು ಕೊಡಲಾಗುತ್ತಿದೆ.